ಮೈಸೂರು ಜಿಲ್ಲೆಯ ಸಾಲಿಗ್ರಾಮದ ಪದ್ಮಿನಿ ನಾಗರಾಜು ಪ್ರಸ್ತುತ ಬೆಂಗಳೂರು ನಿವಾಸಿ. ಕಥೆ, ಕವಿತೆಗಳ ಮೂಲಕ ಸಹೃದಯರಿಗೆ ಪರಿಚಿತರು. 'ಗೆಳತಿಯಾಗುವುದೆಂದರೆ' (ಕವನ ಸಂಕಲನ), 'ಸಮಾಧಿ ಮೇಲಿನ ಹೂ' (ಕಥಾ ಸಂಕಲನ), 'ಅವ್ವ' (ಲಂಕೇಶರ ಆತ್ಮಚರಿತ್ರೆಯನ್ನು ಆಧರಿಸಿದ ನಾಟಕ) ಸೇರಿದಂತೆ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಸಲಹಾ ಸಮಿತಿ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ, ಪ್ರಾಧ್ಯಾಪಕಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ನಾವು ಹೊಂದಿಕೊಳ್ಳಲೇಬೇಕಿತ್ತು. ಆಗೆಲ್ಲಾ ಕವಿ ಕೆ.ಎಸ್. ನರಸಿಂಹಸ್ವಾಮಿ ಅವರ ಕವಿತೆ,

**'ಚಳಿಗಾಲ ಬಂದಾಗ ಎಷ್ಟು ಚಳಿ? ಎಂದರು**
**ಬಂತಲ್ಲ ಬೇಸಿಗೆ, ಕೆಟ್ಟ ಬಿಸಿಲೆಂದರು**
**ಮಳೆ ಬಿತ್ತೊ ಬಿಡದಲ್ಲ ಶನಿ! ಎಂಬ ಟೀಕೆ**
**ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!...'**

ಇಂತಹ ಮನಸ್ಥಿತಿಯಲ್ಲಿಯೇ ನಾವಿದ್ದಾಗ, ಚಿಕ್ಕಮಗಳೂರಿನ ಜನ ಬೆನ್ನಿಗೊಂದು ಛತ್ರಿ ಏರಿಸಿ ಓಡಾಡುವ ಛಾತಿ ರೂಢಿಸಿಕೊಂಡಿದ್ದರು. ಆದರೆ, ಈ ಕಲೆ ನಮಗೆ ಸಿದ್ಧಿಸಿರಲಿಲ್ಲ. ಇದು ಮಲೆನಾಡಿನ ದೈನಂದಿನ ಚಿತ್ರಣವಾಗಿದ್ದರೂ ಅದಕ್ಕೆ ಹೊಂದಿಕೊಳ್ಳಲು ನಮಗೆ ಸ್ವಲ್ಪ ಕಷ್ಟವಾಗಿತ್ತು. ಆದರೆ, ನಾನು ಕಾಲೇಜಿಗೆ ಹೋಗಲು ಪ್ರಾರಂಭಿಸುತ್ತಿದ್ದಂತೆ ಪುಸ್ತಕಕ್ಕಿಂತ ಮೊದಲು ಖರೀದಿ ಮಾಡಿದ್ದು ಛತ್ರಿ. ಹೌದು. ಅದು ಮಲೆನಾಡಿನ ಬೇಸಿಕ್. ಕಾಲೇಜಿಗೆ ಮಳೆಯಲ್ಲಿ ಹೋದ ನಾನು ಮೊದಲ ದಿನ ಛತ್ರಿಯೊಂದಿಗೆ ಹೋಗಿ ಛತ್ರಿಯೊಂದಿಗೆ ವಾಪಸ್ ಬಂದೆ. ಆದರೆ, ಅದು ಮುಂದಿನ ದಿನಗಳಲ್ಲಿ ಸಾಧ್ಯವಾಗಲಿಲ್ಲ. ಮನೆಯಲ್ಲಿ ಮೂರು ಮಕ್ಕಳಿಗೆಂದು ಮೂರು ಛತ್ರಿಗಳನ್ನು ಅಂಗಡಿಯಿಂದ ತಂದಿದ್ದೆವು. ಆದರೆ ಕೆಲವೇ ದಿನಗಳಲ್ಲಿ ನಮಗೆ ಛತ್ರಿ ಹಿಡಿಯುವ ಅಭ್ಯಾಸ ಇಲ್ಲದ್ದರಿಂದ ಎಲ್ಲಿ ಹೋದರೆ ಅಲ್ಲಿಯೇ ಛತ್ರಿಗಳನ್ನು ಬಿಟ್ಟು ಬರುತ್ತಿದ್ದೆವು. ನಾವು ಛತ್ರಿ ಜನಗಳಲ್ಲವಲ್ಲಾ!! ಇದರಿಂದಾಗಿ ಅಪ್ಪ ತನ್ನ ಸಂಬಳದ ಬಹು ಭಾಗವನ್ನು ಛತ್ರಿಗಾಗಿ ಮೀಸಲಿಡಬೇಕಾಯಿತು. ಕೆಲವು ದಿನಗಳ ನಂತರ ಅಮ್ಮ ನಾವು ಮನೆಗೆ ಬಂದರೆ ನಮ್ಮನ್ನು ನೋಡುವ ಮೊದಲು ನಮ್ಮ ಕೈಯಲ್ಲಿನ ಛತ್ರಿಯನ್ನು ಗಮನಿಸುತ್ತಿದ್ದರು. ಇಷ್ಟೆಲ್ಲಾ ಎಚ್ಚರ ವಹಿಸಿದರೂ ಒಬ್ಬರಲ್ಲ ಒಬ್ಬರು ಛತ್ರಿಗಳಿಲ್ಲದೆ ಮನೆಗೆ ಬರುತ್ತಿದ್ದೆವು. ನಮ್ಮ ಛತ್ರಿಗಳು ಕಳವಾಗುತ್ತಿರಲಿಲ್ಲ. ನಾವೇ ಮರೆತು ಬರುತ್ತಿದ್ದ ಮರೆಗುಳಿಗಳಾಗಿದ್ದೆವು. ಕೆಲವೊಮ್ಮೆ ತನ್ನ ಛತ್ರಿಯನ್ನು ಕಳೆದುಕೊಂಡ ಅಣ್ಣ ನನ್ನ ಛತ್ರಿಯನ್ನು ತನ್ನದೆಂದು ವಾದಿಸುತ್ತಿದ್ದ. ನಾನು ಕೂಡ ಅದೇ ನಿಯಮವನ್ನು ಪಾಲಿಸುತ್ತಿದ್ದೆ. ಮೊದಲು ಮೂರಿದ್ದ ಛತ್ರಿಗಳು ಕಡೆಗೆ ಒಂದೇ ಆದಾಗ ಅದು ಯಾರದ್ದು ಅನ್ನೋದೇ ಯಕ್ಷಪ್ರಶ್ನೆಯಾಗಿ ಮನೆಯು ರಣರಂಗವಾಗುತ್ತಿತ್ತು. ನಮ್ಮ ಜಗಳವನ್ನು ಬಿಡಿಸಲು ಅಪ್ಪ ಭಗವದ್ಗೀತೆಯ ಶ್ರೀಕೃಷ್ಣನಾಗುತ್ತಿದ್ದ. ಅಮ್ಮ ತೀರ್ಪು ಕೊಡುವ ಜಡ್ಜಾಗಿ ಅದನ್ನು ಯಾರ ಛತ್ರಿ ಎಂದು ನಿರ್ಧರಿಸುತ್ತಿದ್ದಳು.

ನಮ್ಮೆಲ್ಲರ ವಾದವು ನಾನು ಛತ್ರಿ ಮರೆತಿಲ್ಲ ಇದು ನನ್ನದೇ ಛತ್ರಿ ಎಂದು ಮೂರು ಜನರೂ ಉಳಿದೊಂದು ಛತ್ರಿಗಾಗಿ ಜಗಳವಾಡುತ್ತಿದ್ದೆವು. ವಾರಸುದಾರರು ಯಾರೂ ಗೊತ್ತಿದ್ದರೂ ನಾವು ನಮ್ಮ ನಮ್ಮ ಮೊಂಡುವಾದಗಳನ್ನು ಮಂಡಿಸುತ್ತಿದ್ದೆವು. ಆದರೆ ಸತ್ಯ ನಮ್ಮ ಮೂವರಿಗೂ ಗೊತ್ತಿತ್ತು, ಈ ಛತ್ರಿ ಯಾರದ್ದು ಎಂದು. ಆದರೆ ನಾವ್ಯಾರು ಛತ್ರಿಯನ್ನೇ ಕಳೆದುಕೊಂಡು ಬಂದಿಲ್ಲ ಎಂದು ಸತ್ಯಹರಿಶ್ಚಂದ್ರನಂತೆ ಸತ್ಯವನ್ನೇ ನುಡಿಯುತ್ತಿದ್ದವೇನೋ ಎಂಬಂತೆ ಕಿರುಚಾಡಿ, ಹಾರಾಡಿ, ಅತ್ತು ಸೀನ್ ಕ್ರಿಯೇಟ್ ಮಾಡುತ್ತಿದ್ದೆವು. ನಮ್ಮ ನಮ್ಮ ಅಸ್ತಿತ್ವವನ್ನು ಉಳಿಸಿ ಕೊಳ್ಳಲು ಇದು ನಮಗೆ ಅನಿವಾರ್ಯವಾಗಿತ್ತು!

ಹೀಗೆ ಮಳೆಗಾಲವಿಡೀ ನಡೆಯುತ್ತಿದ್ದ ಈ ಪರಿಸ್ಥಿತಿಯನ್ನು ಗಮನಿಸಿ ಅಮ್ಮ ಕಡೆಗೊಂದು ಉಪಾಯವನ್ನು ಮಾಡಿದಳು. ಅದೇನೆಂದರೆ, ನಮ್ಮ ನಮ್ಮ ಛತ್ರಿಗೆ ನಮ್ಮ ನಮ್ಮ ಹೆಸರುಗಳ ಇನ್ಷಿಯಲ್ ಅನ್ನು ಸೂಜಿದಾರದಲ್ಲಿ ಶ್ರವಣಬೆಳಗೊಳದ